# ಶ್ರೀರಾಮಕೃಷ್ಣ ಆರಾತ್ರಿಕ

ಸ್ವಾಮಿ ಆತ್ಮಜ್ಞಾನಂದ



**ರಾಮಕೃಷ್ಣ ಮಹಾಸಂಘದ ಎಲ್ಲ ಶಾಖಾಕೇಂದ್ರಗಳಲ್ಲಿ ಸಂಧ್ಯಾರತಿಯ ವೇಳೆಗೆ ಹಾಡುವ 'ಶ್ರೀರಾಮಕೃಷ್ಣ ಆರಾತ್ರಿಕ'ದ ಹಿಂದೆ ಅತ್ಯಂತ ರೋಚಕವಾದ, ಮಹತ್ವಪೂರ್ಣವಾದ ಇತಿಹಾಸವಿದೆ. ಶ್ರೀರಾಮಕೃಷ್ಣರ ದಿವ್ಯ ವ್ಯಕ್ತಿತ್ವ, ಜೀವನ-ದರ್ಶನ ಹಾಗೂ ಅವರನ್ನು ಕುರಿತ ಪ್ರಾರ್ಥನೆ ಇವುಗಳನ್ನು ಒಳಗೊಂಡಿರುವ ಅತ್ಯಂತ ಅರ್ಥಗರ್ಭಿತವಾದ ಈ ಕೃತಿಯ ಬಗ್ಗೆ ಹಾಗೂ ಆರಾತ್ರಿಕವನ್ನು ಹಾಡುವ ಸಂಪ್ರದಾಯದ ಬಗ್ಗೆ ಬರೆದಿರುವ ಪೂಜ್ಯ ಸ್ವಾಮೀಜಿಯವರು 'ವಿವೇಕಪ್ರಭ' ದ ಸಂಪಾದಕರಾಗಿದ್ದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಅವರು ಪ್ರಸ್ತುತ ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.**

ಸಂಧ್ಯಾಕಾಲವಾದೊಡನೆ ದಿವ್ಯತ್ರಯರ ಅನುರಾಗಿಗಳಾದ ಸಾಧುಗಳು ಹಾಗೂ ಭಕ್ತರು ಒಗ್ಗೂಡಿ **'ಖಂಡನ ಭವಬಂಧನ'** ವೆಂದು ಪ್ರಾರಂಭವಾಗುವ ಆರಾತ್ರಿಕ ಭಜನೆಯನ್ನು ಹಾಡಿ ತಮ್ಮ ತಮ್ಮ ಸಾಧನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ರಾತ್ರಿಯು ಎಲ್ಲೆಡೆ ಆವರಿಸುತ್ತಿರುವಾಗ, ಸಂಜೆಯ ಹೊತ್ತು ಪ್ರಾರಂಭ ವಾಗುತ್ತಿರುವ ಸಮಯದಲ್ಲಿ ಹಾಡುವ ಈ ಕೀರ್ತನೆ ಅಥವಾ ಭಜನೆಯನ್ನು 'ಆರಾತ್ರಿಕ'ವೆಂದು ಕರೆಯುತ್ತೇವೆ. ದೀಪವನ್ನು ಸಂಜೆಯ ಹೊತ್ತು ಬೆಳಗಿಸಿ, ಕೈಮುಗಿದು, ದೇವರಿಗೆ ಪ್ರಾರ್ಥನೆ ಸಲ್ಲಿಸುವುದು ಸಾಮಾನ್ಯವಾಗಿ ಎಲ್ಲ ಧರ್ಮಗಳಲ್ಲೂ , ಸಂಸ್ಕೃತಿ ಗಳಲ್ಲೂ ಕಂಡುಬರುತ್ತದೆ. ರಾತ್ರಿಯ ಕತ್ತಲಿಗೆ ಅಣಿವಾಗುವು ದನ್ನು ಇದು ಸೂಚಿಸುತ್ತದೆ. ಹಿಂದಿನ ಕಾಲದಲ್ಲಿ ವಿದ್ಯುತ್ ಇಲ್ಲ ದಿದ್ದಾಗ ಕತ್ತಲಾಗುವ ಮುಂಚೆ ತಮ್ಮ ತಮ್ಮ ನಿವಾಸಗಳಿಗೆ ಹಿಂದಿ ರುಗಿ, ದೀಪಗಳನ್ನು ಬೆಳಗಿ ತಮ್ಮನ್ನು ಕಾಪಾಡಿಕೊಳ್ಳುತ್ತಿದ್ದ ಸಂಪ್ರ ದಾಯದಿಂದ ಇದು ಬಂದಿದೆ ಎಂದು ಭಾವಿಸಬಹುದು. ಸಂಸ್ಕೃತ ವ್ಯಾಕರಣದ ದೃಷ್ಟಿಯಿಂದ ಧಾತುವಿಗೆ ಅಥವಾ ಪದಕ್ಕೆ, 'ಆ' ಎಂಬ ಉಪಸರ್ಗ ಸೇರಿಕೊಂಡಾಗ, ಅದು 'ಎಲ್ಲಡೆ, ಸುತ್ತಲೂ' ಎಂಬ ಅರ್ಥವನ್ನು ಕೊಡುತ್ತದೆ. ಇಡೀ ರಾತ್ರಿಯನ್ನೂ, ಕತ್ತ ಲನ್ನೂ ಇದು ಸೂಚಿಸುತ್ತದೆ. ಸಂಜೆಯ ವೇಳೆಯ ದೀಪಾರಾಧನೆ ಯೆಂದೂ ಈ ಶಬ್ದವನ್ನು ಅರ್ಥೈಸಬಹುದು. ಆರತಿಯೆಂದು ಸಾಮಾನ್ಯವಾಗಿ ಬಳಸುವ ಶಬ್ದವೂ ಇದರ ಅಪಭ್ರಂಶವೇ. ಪ್ರಾಪಂಚಿಕ ಭೋಗ-ಸುಖಗಳಿಂದ ವಿಮುಖವಾಗುವುದನ್ನು ಆರತಿ ಎಂದು ಅರ್ಥ ಮಾಡಲಾಗಿದೆ. ಪ್ರಾಪಂಚಿಕ ಚಟುವಟಿಕೆ ಚಿಂತನೆಗಳಿಂದ ಬಳಲಿದ ದೇಹಮನಸ್ಸುಗಳಿಗೆ ವಿಶ್ರಾಂತಿ ನೀಡಲು ಇದು ಸುಸಮಯ. ಪ್ರಕೃತಿಯು ಶಾಂತವಾಗುತ್ತಿರುವಾಗ, ಪ್ರಾಣಿಪಕ್ಷಿಗಳು ತಮ್ಮ ತಮ್ಮ ಗೂಡುಗಳಿಗೆ ಹಿಂದಿರುಗುತ್ತಿರು ವಾಗ, ಕ್ರೂರ ಮೃಗಗಳ ಬೇಟೆಯ ಸಮಯವಾದಾಗ ಶಾಂತಿ ನೆಮ್ಮದಿಗಳನ್ನು ಅರಸಿ ಅಂತರ್ಮುಖವಾಗಲು ಇದು ಸೂಕ್ತ ಸಮಯ. ಎಲ್ಲ ಇತರ ಕಾರ್ಯಗಳನ್ನು ಬದಿಗೊತ್ತಿ ತಮ್ಮ ಆರಾಧ್ಯ ದೇವರ ಸ್ತುತಿಯನ್ನು ಮಾಡಿ, ದಿನದ ವೇಳೆಯಲ್ಲಿ ಆದ ತಪ್ಪು ಒಪ್ಪುಗಳ ವರದಿ ಒಪ್ಪಿಸಿ ಕ್ಷಮೆ ಕೇಳುವುದು ಈ ಕ್ರಿಯೆಯ ಹಿನ್ನೆಲೆಯಲ್ಲಿರುವ ತಾತ್ಪರ್ಯ.

ಶ್ರೀರಾಮಕೃಷ್ಣರ ನೇರ ಶಿಷ್ಯರೂ ಹಾಗೂ ಅವರ ಮಾನಸ ಪುತ್ರರೆಂದೂ ಪ್ರಸಿದ್ಧರಾದ ಸ್ವಾಮಿ ಬ್ರಹ್ಮಾನಂದಜಿ ಹೇಳುತ್ತಾರೆ, ''ಪ್ರತಿನಿತ್ಯವೂ ದಿನಚರಿಯನ್ನು ಬರೆಯುವ ಅಭ್ಯಾಸವನ್ನಿಟ್ಟು ಕೊಳ್ಳಬೇಕು. ಎಷ್ಟು ಸಮಯವನ್ನು ಉಪಯುಕ್ತವಾಗಿ, ಭಗ ವಂತನ ಸ್ಮರಣೆ-ಸೇವೆ-ನಿಃಸ್ವಾರ್ಥ ಚಿಂತನೆಗಳಲ್ಲಿ ತೊಡಗಿಸಿ

ಕೊಂಡಿದ್ದೇವೆ ಎಂಬ ವಿಶ್ಲೇಷಣೆ ಆಗ ಮಾತ್ರ ಸಾಧ್ಯವಾಗುತ್ತದೆ. ನಮ್ಮನ್ನು ಉನ್ನತಗೊಳಿಸಿಕೊಳ್ಳುವ ಮಾರ್ಗವಿದು.'' ಮತ್ತೊಬ್ಬ ನೇರಶಿಷ್ಯರಾದ ಸ್ವಾಮಿ ಶಿವಾನಂದಜಿಯವರ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ನಾವು ಸ್ಮರಿಸಿಕೊಳ್ಳಬೇಕು. ಒಮ್ಮೆ ಬೇಲೂರು ಮಠದಲ್ಲಿ ಒಬ್ಬ ಬ್ರಹ್ಮಚಾರಿ ಸಾಧುಜೀವನಕ್ಕೆ ಅನುಚಿತವಾದುದನ್ನು ಮಾಡಿದಾಗ ಎಲ್ಲರೂ ಅವನಿಗೆ ಶಿಕ್ಷೆಯಾಗಬೇಕು ಹಾಗೂ ಮಠದಿಂದ ಅವನನ್ನು ಕಳುಹಿಸಿಬಿಡಬೇಕೆಂದು ಯೋಚಿಸುತ್ತಿದ್ದರು. ಶಿವಾನಂದರ ಬಳಿಗೆ ಆ ತಪ್ಪಿತಸ್ಥನನ್ನು ಕರೆತಂದು ಎಲ್ಲ ವರದಿ ಹೇಳಿದಾಗ ಅವರು, ''ನೀನು ಪ್ರತಿನಿತ್ಯ ಮಂಗಳಾರತಿ ಹಾಗೂ ಸಂಧ್ಯಾರತಿಗಳಲ್ಲಿ ಭಾಗವಹಿಸುತ್ತಿರುವೆಯಾ?'' ಎಂದು ಪ್ರಶ್ನಿಸಿದರು. ಆ ವ್ಯಕ್ತಿ ಹೌದೆಂದಾಗ ಸ್ವಾಮಿ ಶಿವಾನಂದರು, ''ನಿನ್ನ ದೋಷಗಳನ್ನು ಶ್ರೀರಾಮಕೃಷ್ಣರು ಮನ್ನಿಸುವರು. ಆರತಿಯನ್ನು ಸ್ವೀಕರಿಸಿ ನೀನು ಪವಿತ್ರನಾಗುತ್ತೀಯೆ'' ಎಂದು ನುಡಿದರು. ಮಂಗಳಾರತಿ ಹಾಗೂ ಸಂಧ್ಯಾರತಿಗಳಲ್ಲಿ ಭಾಗವಹಿಸಿ ಶ್ರೀರಾಮಕೃಷ್ಣರ ಕೃಪೆಗೆ ನಾವು ಪಾತ್ರರಾಗುತ್ತೇವೆ, ಪವಿತ್ರರಾಗುತ್ತೇವೆ ಎಂದು ಅವರು ಸ್ಪಷ್ಟವಾಗಿ ಹೇಳಿದರು. ಭಗವಂತನು ಅಂತರ್ಯಾಮಿ ಹಾಗೂ ನಮ್ಮ ಮನಸ್ಸಿನ ಆಳವನ್ನು ಚೆನ್ನಾಗಿ ಬಲ್ಲನು. ಆದರೆ ಅವನಲ್ಲಿ ಪ್ರಾರ್ಥನೆಯನ್ನು ಮಾಡಿ ನಿಃಸಹಾಯಕರಾಗಿ ಮನಬಿಚ್ಚಿ ಕ್ಷಮೆ ಕೇಳಿದಾಗ ಭಗವಂತನ ಶಕ್ತಿಯಿಂದ ನಮ್ಮ ಲೋಪದೋಷಗಳನ್ನು ಗೆಲ್ಲುವ ಸಾಮರ್ಥ್ಯ ನಮ್ಮದಾಗುತ್ತದೆ.

'ವಚನವೇದ'ದಲ್ಲಿ ಶ್ರೀರಾಮಕೃಷ್ಣರು ಸಂಧ್ಯಾಕಾಲವಾದೊಡನೆ ಕೈ ತಟ್ಟುತ್ತ ಆನಂದತನ್ಮಯರಾಗಿ ದೇವರ ಹೆಸರುಗಳನ್ನು ಹೇಳುತ್ತಿದದ್ದನ್ನು ನಾವು ಓದುತ್ತೇವೆ. ಕೋಣೆಯಲ್ಲಿದ್ದ ಶಿಷ್ಯರಿಗೆ ಹಾಗೂ ಭಕ್ತರಿಗೆ ಹಾಗೆ ನಾಮಸ್ಮರಣೆ ಮಾಡುವಂತೆ ಪ್ರೇರೇಪಿಸುತ್ತಿದ್ದರು. ''ಚಪ್ಪಾಳೆ ಹಾಕುತ್ತ ನಾಮಸ್ಮರಣೆ ಮಾಡಿದರೆ ಪಾಪಗಳೆಲ್ಲ ಕಾಗೆಗಳು ಮರದ ಕೊಂಬೆಗಳಿಂದ ಹಾರಿಹೋಗುವಂತೆ ನಮ್ಮನ್ನು ಬಿಟ್ಟುಹೋಗುತ್ತವೆ'' ಎಂದು ಹೇಳುತ್ತಿದ್ದರು. ಭಕ್ತಿಭಾವದಿಂದ ಹಾಡುಗಳಿಗೆ ಹೊಸ ಸಾಲುಗಳನ್ನೋ ಅಥವಾ ಪದಗಳನ್ನೊ ಸೇರಿಸಿ ನೆರೆದವರ ಮನಸ್ಸುಗಳನ್ನು ಆಕರ್ಷಿಸುತ್ತಿದ್ದರು. ಅವರ ಕಂಠ ಅತ್ಯಂತ ಮಧುರವಾಗಿತ್ತು ಹಾಗೂ ಲಯಬದ್ಧವಾಗಿ ತಾಳದ ಕಡೆ ಗಮನವಿಟ್ಟು ಹಾಡುತ್ತಿದ್ದರು. ಅವರು ಯಾವ ತಪ್ಪನ್ನೂ ಮಾಡುತ್ತಿರಲಿಲ್ಲ ಹಾಗೂ ಹಾಡುವಾಗ ತಪ್ಪಿದರೆ ಸಹಿಸುತ್ತಿರಲಿಲ್ಲ. ದೇವರ ಕೀರ್ತನೆಗಳನ್ನು ಅಷ್ಟು ಏಕಾಗ್ರತೆಯಿಂದ ಹಾಡುತ್ತಿದ್ದರು ಹಾಗೂ ಪದಗಳ ಅರ್ಥದ ಬಗ್ಗೆ ಯಾವಾಗಲೂ ಸಚೇತನರಾಗಿದ್ದರು.

ಶ್ರೀರಾಮಕೃಷ್ಣರ ಪ್ರಿಯಶಿಷ್ಯರಾದ ಸ್ವಾಮಿ ವಿವೇಕಾನಂದರು 'ಶ್ರೀರಾಮಕೃಷ್ಣ ಆರಾತ್ರಿಕ'ವನ್ನು ರಚಿಸಿದಾಗ ರಾಗ-ತಾಳ-ಲಯಗಳೊಂದಿಗೆ ಶ್ರೀರಾಮಕೃಷ್ಣರ ಸಂಪೂರ್ಣ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಒಂದು ಅಪೂರ್ವ ಕೃತಿಯನ್ನು ಸೃಷ್ಟಿಸಿದರು.



ಸ್ವಾಮಿ ರಾಮಕೃಷ್ಣಾನಂದರು

ಬಾಲ್ಯದಿಂದಲೇ ಸಂಗೀತದಲ್ಲಿ ನುರಿತಿದ್ದ ಸ್ವಾಮೀಜಿಗೆ ಇದೇನೂ ಕಷ್ಟಸಾಧ್ಯವಾಗಿರಲಿಲ್ಲ. ವರಾಹನಗರದಲ್ಲಿ ಮೊದಲ ಮಠ ಪ್ರಾರಂಭಿಸಿದ್ದ ಕಾಲದಲ್ಲಿ ಸಂಧ್ಯಾರತಿ ಒಂದು ಅವಿಸ್ಮರಣೀಯ ದೃಶ್ಯವಾಗಿತ್ತು. ಪೂಜ್ಯ ರಾಮಕೃಷ್ಣಾನಂದಜಿ ಆರತಿಯನ್ನು ಮಾಡುತ್ತಿದ್ದರು. ಕಾಶಿಯ ವಿಶ್ವನಾಥನಿಗೆ ಆರತಿ ಮಾಡುವಾಗ ಹಾಡುವ 'ಭಜ ಶಿವ ಓಂಕಾರ' ಎಂಬ ಕೀರ್ತನೆಯನ್ನೇ ಆಗ ಬಳಸಲಾಗುತ್ತಿತ್ತು. ಅದರೊಂದಿಗೆ ರಾಮಕೃಷ್ಣಾನಂದರು ಮನಮೋಹಕವಾಗಿ ಭಾವಾನ್ವಿತರಾಗಿ ನೃತ್ಯ ಮಾಡುತ್ತ ಆರತಿ ಮಾಡುತ್ತಿದ್ದರು. ಉಳಿದ ಶಿಷ್ಯರು ಹಾಗೂ ಭಕ್ತರೂ ಕೂಡ ನೃತ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು. ಹಾಗೆ ನೃತ್ಯ ಮಾಡುತ್ತ ಸಮಯದ ಪ್ರಜ್ಞೆಯನ್ನೇ ಕಳೆದುಕೊಂಡು ಬಿಡುತ್ತಿದ್ದರು. ೪೫ ನಿಮಿಷಗಳಿಂದ ಒಂದು ಘಂಟೆಯನ್ನು ಮೀರಿ ಆರತಿ ಮಾಡುತ್ತಿದ್ದರು! ಶಶಿ ಮಹಾರಾಜ್ ಅಥವಾ ರಾಮಕೃಷ್ಣಾನಂದರು ಚೆನ್ನೈಗೆ ತೆರಳಿದ ಮೇಲೆ ಸಂಧ್ಯಾರತಿಯು ಕಳೆಗುಂದಿ ನೀರಸವಾಗತೊಡಗಿತು. ಶಶಿ ಮಹಾರಾಜ್ ಚೆನ್ನೈನಲ್ಲಿ ಆರತಿ ಮಾಡುತ್ತಿದ್ದಾಗ ಲಯಬದ್ಧವಾಗಿ ತೂರಾಡುತ್ತಿದ್ದುದು ಹಾಗೂ ಕೆಲವೊಮ್ಮೆ ನೃತ್ಯ ಮಾಡು



ಸ್ವಾಮಿ ವಿವೇಕಾನಂದರು ಎರಡನೆಯ ಬಾರಿ ಅಮೆರಿಕದಿಂದ ಭಾರತಕ್ಕೆ ಹಿಂದಿರುಗಿ ಬರುವಷ್ಟರಲ್ಲಿ ಮಠವನ್ನು ಬೇಲೂರಿನಲ್ಲಿರುವ ನೀಲಾಂಬರ್ ಬಾಬು ಅವರ ತೋಟದ ಮನೆಗೆ ಸ್ಥಳಾಂತರವಾಗಿತ್ತು. ಅಲ್ಲಿ ಮತ್ತೆ ಸಂಧ್ಯಾರತಿಯ ಸಮಯದಲ್ಲಿ ನೃತ್ಯ ಮಾಡುವುದು ಪ್ರಾರಂಭವಾಯಿತು. ಸ್ವಾಮಿ ವಿವೇಕಾನಂದರು ಅಮೆರಿಕಾದಿಂದ ಬರೆದ ಒಂದು ಪತ್ರದಲ್ಲಿ ಇದನ್ನು ಮೆಚ್ಚುತ್ತ ಬರೆದಿದ್ದರು. ಸಂಧ್ಯಾರತಿಯನ್ನು ಹಾಡುವಾಗ ಆನಂದದ ಅನುಭವವಾಗಬೇಕು, ಜೀವತುಂಬಿ ಬಂದಂತಿರಬೇಕು ಎಂಬುದು ವಿವೇಕಾನಂದರ ಅಭಿಪ್ರಾಯ. ಅವರು ಮರಳಿ ಬಂದ ಮೇಲೆ ಶ್ರೀರಾಮಕೃಷ್ಣ ಜಯಂತಿಯಂದು ಪ್ರಥಮ ಬಾರಿಗೆ 'ಖಂಡನ ಭವಬಂಧನ..' ರಚಿಸಿ, ರಾಗ ಸಂಯೋಜಿಸಿ ಹಾಡಲಾಯಿತು. ಇದು ನಡೆದಿದ್ದು ೧೮೯೮ರಲ್ಲಿ! ತಾವೇ ಆರತಿಯನ್ನು ಹಾಡುತ್ತ ಜೊತೆಯಲ್ಲಿ ಪಖಾವಾಜನ್ನು ನುಡಿಸುತ್ತ ಒಂದು ಅದ್ಭುತವನ್ನೇ ಮಾಡಿದರು. ಸಾಕ್ಷಾತ್ ಶಿವನೇ ಮೃದಂಗವನ್ನು ನುಡಿಸುತ್ತಿರುವಂತೆ ನೆರೆದವರಿಗೆ ಭಾಸವಾಯಿತು. ಮೊದಲು ಹಾಡಿದಾಗ 'ಖಂಡನ ಭವಬಂಧನ...' ಎಂಬ ಮೊದಲ ಎರಡು ಸಾಲುಗಳು ಹಾಗೂ ಕೊನೆಯಲ್ಲಿ ಬರುವ 'ನಮೋ ನಮೋ ಪ್ರಭು..' ಎಂಬ ಸಾಲುಗಳು ಮಾತ್ರ ಇದ್ದವು. ಮತ್ತೆ ಮತ್ತೆ ಬದಲಾಗುತ್ತಿದ್ದ ತಾಳಗಳನ್ನು ಸಂಯೋಜಿಸಿದ್ದರಿಂದ ಇತರ ಸಾಧು-ಬ್ರಹ್ಮಚಾರಿಗಳಿಗೆ ಕಷ್ಟವಾಯಿತು. ಸ್ವಾಮೀಜಿಗೆ ಇದನ್ನು ತಿಳಿಸಲಾಗಿ, ಅವರು ಉಳಿದ ಸಾಲುಗಳನ್ನು ರಚಿಸಿ ಸೇರಿಸಿದರು. ಆರತಿಯ ಹಾಡಿನಲ್ಲಿ ಮೊದಲು ಶ್ರೀರಾಮಕೃಷ್ಣ ಅವತಾರದ ಉದ್ದೇಶ ಹಾಗೂ ಮಹಿಮೆಗಳನ್ನು ಚಿತ್ರಿಸಿ ಅವರ ವ್ಯಕ್ತಿತ್ವದ ಘನತೆಯನ್ನು ನಿರೂಪಿಸಿ, ಚೌತಾಲ್ ಎಂಬ ಸಾಂಪ್ರದಾಯಿಕ ತಾಳದಲ್ಲಿ ಅದಕ್ಕೆ ಒಂದು ರೂಪವನ್ನು ನೀಡಲಾಗಿತ್ತು. ನಂತರ ಆನಂದದಿಂದ ಹಾಡುವ 'ನಮೋ ನಮೋ ಪ್ರಭು..' ಎಂಬುದು ತ್ರಿತಾಲದ ಅಂಶ. ಮೃದಂಗದ ಧ್ವನಿ, ಕುಣಿಯುವ ಪದಗಳೊಂದಿಗೆ ಕಡೆಯಲ್ಲಿ ಜೈ ಹೇಳುವ ಸಾಲುಗಳನ್ನು ಸ್ವಾಮೀಜಿ ಸೇರಿಸಿದ್ದರು. ಕೆಲವು ದಿನಗಳ ನಂತರ ಎಲ್ಲರೂ ಕೇಳಿಕೊಂಡಾಗ 'ಓಂ ಹ್ರೀಂ ಋತಂ..' ರಚಿಸಿ ಅದನ್ನು ಆರತಿಯ ಸಮಯದಲ್ಲಿ ಹಾಡಬೇಕು ಎಂದು ನಿರ್ದೇಶಿಸಲಾಯಿತು.


ರಾಮಕೃಷ್ಣ ಮಠ ಮತ್ತು ಮಿಷನ್ನಿನ ಎಲ್ಲ ಕೇಂದ್ರಗಳಲ್ಲಿ ಸಂಜೆಯಾದೊಡನೆ 'ಖಂಡನ ಭವ ಬಂಧನ..' ಕೇಳಿಬರುತ್ತದೆ. ಮೂಲತಃ ಇದು ಬಂಗಾಳಿ ಭಾಷೆಯಲ್ಲಿದ್ದರೂ ಬಹಳಷ್ಟು ಸಂಸ್ಕೃತ ಪದಗಳೇ ಇಲ್ಲಿ ಪ್ರಧಾನವಾಗಿವೆ. ಅಮೆರಿಕದ ಕೆಲವು ಕೇಂದ್ರಗಳಲ್ಲಿ ಇದರ ಆಂಗ್ಲಭಾಷೆಯ ಅವತರಣಿಕೆಯನ್ನು ಪಾಶ್ಚಾತ್ಯ ಸಂಗೀತದ ಧಾಟಿಯಲ್ಲಿ ಹಾಡುತ್ತಾರೆ. ಭಾರತದ ಅನೇಕ ಗ್ರಾಮೀಣ ಕೇಂದ್ರಗಳಲ್ಲಿ ಹಾಗೂ ಹಾಡುವವರಿಲ್ಲದ ಸಂದರ್ಭದಲ್ಲಿ ಧ್ವನಿಸುರುಳಿಯನ್ನು ಉಪಯೋಗಿಸಲಾಗುತ್ತದೆ. ಭಾರತದ ರಾಷ್ಟ್ರಗೀತೆಯನ್ನು ರಚಿಸಿದ ವಿಖ್ಯಾತ ಕವಿ ರವೀಂದ್ರನಾಥ ಠಾಕೂರರು ಕೂಡ ಬಂಗಾಳಿ ಭಾಷೆಯಲ್ಲಿಯೇ ಹಾಡನ್ನು ರಚಿಸಿದ್ದಾರೆ ಎಂಬುದು ಆಶ್ಚರ್ಯಕರವಲ್ಲವೆ !

ಶ್ರೀರಾಮಕೃಷ್ಣ ಆರಾತ್ರಿಕದ ಕೆಲವು ವೈಭವಗಳನ್ನು ಗಮನಿಸೋಣ. ಇಡೀ 'ಖಂಡನ ಭವಬಂಧನ' ದಲ್ಲಿ ನಿಮಗೆ ಎಲ್ಲೂ ಶ್ರೀರಾಮಕೃಷ್ಣರ ಹೆಸರು ಕಾಣುವುದಿಲ್ಲ! ಇದರಲ್ಲಿ ಅವತಾರ ತತ್ತ್ವ, ಅವರ ಅಪಾರ ಕೃಪೆ, ಸತ್ಯನಿಷ್ಠೆ ಹಾಗೂ ವೈರಾಗ್ಯಗಳನ್ನು ಕೊಂಡಾಡಿದ್ದಾರೆ ಸ್ವಾಮೀಜಿ. ಇಡೀ ಜಗತ್ತಿಗೆ ದಾರಿದೀಪದಂತಿರುವ ಅವರ ಅಪೂರ್ವ ಜೀವನದ ಮಹಿಮೆಯನ್ನು ವಿವರಿಸುತ್ತ ಅವರ ನಾಮಸ್ಮರಣೆಯಿಂದ ಮನಸ್ಸಿನ ಕಲುಷವೆಲ್ಲ ನಾಶವಾಗುವುದು ಎಂದು ಸ್ವಾಮೀಜಿ ಸ್ಪಷ್ಟವಾಗಿ 'ಸಂಪದ ತವ ಶ್ರೀಪದ..' ಎಂಬ ಚರಣದಲ್ಲಿ ತೋರಿಸಿದ್ದಾರೆ. ಶ್ರೀರಾಮಕೃಷ್ಣರನ್ನು ಯಾವ ಭಾವದಿಂದಲಾದರೂ ಸಮೀಪಿಸಬಹುದು. ಅವರು ತಂದೆ-ತಾಯಿ, ಬಂಧು, ಪ್ರೀತಿಯ ಶಿಶು, ಪ್ರಿಯತಮ, ಇಷ್ಟದೇವತೆ ಎಲ್ಲವೂ ಆಗಿದ್ದಾರೆ. 'ಅವರು ಭಾವಗಳ ಸಾಗರ-ಅವರ ಭಾವಗಳಿಗೆ ಅಂತ್ಯವಿಲ್ಲ. ಶಿಷ್ಯರು ಹಾಗೂ ಭಕ್ತರು ಅವರನ್ನು ನಾನಾ ರೀತಿಗಳಲ್ಲಿ ಆರಾಧಿಸಿ ಸಿದ್ಧಿ ಪಡೆದಿದ್ದಾರೆ. ಜಗತ್ತಿನ ದುಃಖಗಳನ್ನು ನಿವಾರಿಸಲೋಸುಗ, ಕಲಿಯ ಕಲ್ಮಷವನ್ನು ತಮ್ಮ ಜ್ಞಾನದ ಅಂಜನದಿಂದ ದೂರಮಾಡಲು ಇಳಿದು ಬಂದಿದ್ದಾರೆ. ತ್ಯಾಗ, ವೈರಾಗ್ಯಗಳಲ್ಲಿ ಅವರನ್ನು ಮೀರಿಸುವವರಿಲ್ಲ. ಅವರ ಕೃಪೆಯಿದ್ದರೆ ಮಾತ್ರ ಈಶ್ವರನಲ್ಲಿ ಅನುರಾಗ-ಭಕ್ತಿಗಳು ಉಂಟಾಗುತ್ತವೆ. ಹೃದಯದ ಅಂತರಾಳವನ್ನು ಬೆಳಗುವ ಪವಿತ್ರಜ್ಯೋತಿ

ಅವರು. ವ್ಯಕ್ತಿಗಳಲ್ಲಿರುವ ತಮಸ್ಸನ್ನು ಹೋಗಲಾಡಿಸಿ ಸತ್ತ್ವ ಗುಣದಲ್ಲಿ ನಿಮ್ಮ ಅನುರಾಗಿಗಳನ್ನು ನೆಲೆನಿಲ್ಲಿಸುವ ನೀವು ಅತ್ಯಂತ ಮಂಗಳಕರರು; ನಿಮಗೆ ಜಯವಾಗಲಿ! ನಿಮಗೆ ನಾವು ಮತ್ತೆ ಮತ್ತೆ ನಮಸ್ಕರಿಸುತ್ತೇವೆ.' ಶ್ರೀರಾಮಕೃಷ್ಣರ ಮಹಿಮೆಯನ್ನು ಗುರುತಿಸಿ ಅವರು ಅವತರಿಸಿದ ಉದ್ದೇಶವನ್ನು ಅರಿತು ಸಂಪೂರ್ಣವಾಗಿ ಅವರಿಗೆ ಬೆಂಬಲ ನೀಡಿದವರೆಂದರೆ ಶ್ರೀಮಾತೆ ಹಾಗೂ ಸ್ವಾಮಿ ವಿವೇಕಾನಂದರು. ಶ್ರೀಮಾತೆ ಜಯರಾಂಬಾಟಿಯಲ್ಲಿ, ಕೋಯಲ್‌ಪಾರಾದಲ್ಲಿ ಹಾಗೂ ಕಲ್ಕತ್ತೆಯ 'ಉದ್ಬೋಧನ' ದಲ್ಲಿ ಆರತಿಯ ಹಾಡನ್ನು ಆಲಿಸಿರುವ ವರದಿ ಅವರ ಜೀವನದಲ್ಲಿ ಹಲವೆಡೆ ಬರುತ್ತದೆ. ಆರತಿಯ ಸಮಯವಾದಾಗ, ಹಾಡು ಪ್ರಾರಂಭವಾದಾಗ ಶ್ರೀರಾಮಕೃಷ್ಣರ ಧ್ಯಾನದಲ್ಲಿ ತಲ್ಲೀನರಾಗಿ ಬಿಡುತ್ತಿದ್ದರು ಶ್ರೀಮಾತೆ. ಜಗತ್ತಿಗೆ ತ್ಯಾಗ, ವೈರಾಗ್ಯಗಳ ಉತ್ಕೃಷ್ಟತೆಯನ್ನು ತೋರಲು ಹಾಗೂ ಸಮದರ್ಶನದ ಮಹಿಮೆಯನ್ನು ಸಾರಲು ಶ್ರೀರಾಮಕೃಷ್ಣರ ಅವತಾರವಾಗಿದೆ ಎಂದು ಶ್ರೀಮಾತೆ ಹೇಳಿದ್ದಾರೆ.

ಆರತಿ ಬೆಳಗುವುದರ ಹಿನ್ನೆಲೆಯಲ್ಲಿ ಬಹಳ ಮುಖ್ಯವಾದ ಮತ್ತೊಂದು ಅಂಶವಿದೆ. ಬಾಲಕೃಷ್ಣನು ವೃಂದಾವನದಲ್ಲಿ ಗೋವುಗಳನ್ನು ತನ್ನ ಮನೆಗೆ ಹಿಂದಿರುಗಿ ಕರೆತಂದಾಗ ಅವನ ಬರುವಿಕೆಗಾಗಿ ತವಕದಿಂದ ಕಾಯುತ್ತಿದ್ದ ತಾಯಿ ಯಶೋದೆಯು ಸಂಭ್ರಮದಿಂದ ದೀಪದ ಬೆಳಕಿನಲ್ಲಿ ಅವನ ಸುಕೋಮಲ ಶರೀರಕ್ಕೆ ಯಾವುದೇ ಗಾಯಗಳಾಗಿಲ್ಲ ತಾನೇ ಎಂದು ಪರೀಕ್ಷಿಸಿ, ಅವನ ಮೈ ತೊಳೆದು, ಅಲಂಕರಿಸಿ ಗಾಳಿ ಬೀಸುತ್ತ ದಣಿವು ನಿವಾರಿಸುತ್ತಿದ್ದಳು. ಈ ವೈಷ್ಣವ ಭಕ್ತಿಯನ್ನೇ ಆರತಿಯಲ್ಲಿ ನಾವು ಕಾಣಬಹುದು. ಭಗವಂತನಿಗೆ ಸೇವೆ ಆರೈಕೆಗಳ ಮೂಲಕ ಸಮರ್ಪಿಸಿಕೊಳ್ಳುವುದೇ ಇದರ ಉದ್ದೇಶ. ವೇದಾಂತದ ತತ್ತ್ವಗಳನ್ನೇ ಜನಸಾಮಾನ್ಯರಿಗೆ ಅನುಷ್ಠಾನಯೋಗ್ಯ ಮಾಡಿದ ತಂತ್ರಶಾಸ್ತ್ರವು ಪ್ರಕೃತಿಯಲ್ಲಿರುವ ಪಂಚತತ್ತ್ವಗಳನ್ನು — ಪೃಥ್ವಿ, ಅಪ್, ತೇಜ, ವಾಯು ಹಾಗೂ ಆಕಾಶ ಎಂದು ಗುರುತಿಸಿ ಅವುಗಳ ಗುಣಗಳಾದ ಗಂಧ (ವಾಸನೆ), ರಸ (ಒದ್ದೆ, ತೇವಾಂಶ), ರೂಪ, ಸ್ಪರ್ಶ ಹಾಗೂ ಶಬ್ದಗಳ ಮೂಲಕ ಭಗವಂತನ ಸೇವೆಯನ್ನು ವಿಧಿಸುತ್ತದೆ. ಪೃಥ್ವಿಯಲ್ಲಿರುವ ಎಲ್ಲ ವಸ್ತುಗಳೂ ಈ ಪಂಚತತ್ತ್ವಗಳಿಂದ ಉದ್ಭವಿಸಿವೆ. ನಾವೂ ಕೂಡ ಈ ಪಂಚತತ್ತ್ವಗಳ ಸಮಾಗಮವೇ ಆದರೂ ನಮ್ಮೊಳಗಿನ ಚೈತನ್ಯ ಮೂಲತಃ ಗುಣಾತೀತ ಸಚ್ಚಿದಾನಂದ ಪರಬರಹ್ಮವೇ. ವೇದಾಂತ ಇದನ್ನೇ ಮತ್ತೆ ಮತ್ತೆ ತಿಳಿಸುತ್ತದೆ. ಪೃಥ್ವಿಯ ಗುಣ ವಾಸನೆ. ಅದರ ಉತ್ಪನ್ನವಾದ ಪುಷ್ಪ ಹಾಗೂ ನೀರಿನಲ್ಲೇ ತಯಾರಾಗುವ ಶಂಖದ ಮೂಲಕ ನೀರನ್ನು ಅರ್ಪಿಸಿ ರಸವನ್ನು ಗುಣವಾಗುಳ್ಳ ಅಪ್ ತತ್ತ್ವವನ್ನು ಸಮರ್ಪಿಸುತ್ತೇವೆ. ಅಂತೆಯೇ ದೀಪದ ಮೂಲಕ ತೇಜಸ್ಸು, ಚಾಮರ ಸೇವೆಯ ಮೂಲಕ ವಾಯು ಹಾಗೂ ಬಟ್ಟೆಯ ಮೂಲಕ ಆಕಾಶ ತತ್ತ್ವಗಳನ್ನು ಸಮರ್ಪಿಸುತ್ತೇವೆ. ಇಡೀ ವಿಶ್ವವನ್ನೇ ಆಕಾಶವು ಆವರಿಸಿದೆ. ಹಾಗೆಯೇ ನಾವು ತೊಡುವ ಬಟ್ಟೆಯು ನಮ್ಮಲಿರುವ ಚೈತನ್ಯವನ್ನು ಆಚ್ಛಾದಿಸಿರುವ ವ್ಯಾಪಕತ್ವದ ಸಂಕೇತ. ಹೂವು ರೂಪದ ಸಂಕೇತವೂ ಹೌದು. ಹೀಗೆ ರೂಪ, ರಸ, ಗಂಧಾದಿಗಳನ್ನು ಭಗವಂತನಿಗೆ ಸಮರ್ಪಿಸಿ, ಇವೆಲ್ಲವೂ ಅವ ನಿಂದಲೇ ಬಂದವು. ನನ್ನದೇನೂ ಇಲ್ಲ ಎಂಬ ವಿವೇಚನೆಯನ್ನು ಹಾಗೂ ವಿನಯವನ್ನೂ ಮನಸ್ಸಿಗೆ ತಂದುಕೊಳ್ಳುತ್ತೇವೆ. ಭಗ ವಂತನೇ ನೀಡಿದ ವಸ್ತುಗಳಿಂದ ಅವನ ಆರಾಧನೆಯನ್ನು ಮಾಡಿ ಪಂಚತತ್ತ್ವಗಳನ್ನು ಪವಿತ್ರಗೊಳಿಸಿ ಧನ್ಯತೆಯನ್ನು ಅನುಭವಿಸು ತ್ತೇವೆ. ಹೀಗೆ ಸಂಧ್ಯಾರತಿಯು ಸಾಧನೆಯ ಒಂದು ಪ್ರಮುಖ ಅಂಗವಾಗಿದೆ. ಸ್ವಾಮಿ ವಿವೇಕಾನಂದರು 'ಶ್ರೀರಾಮಕೃಷ್ಣ ಆರಾ ತ್ರಿಕ' ವನ್ನು ರಚಿಸಿ, ಅದಕ್ಕೆ ರಾಗ-ತಾಳ ಸಂಯೋಜಿಸಿ ಈ ಸಾಧನೆಯ ಭಾವಕ್ಕೆ ಪುಷ್ಟಿ ನೀಡಿದ್ದಾರೆ ಎಂದು ನಾವು ಹೇಳ ಬಹುದು.

ಶ್ರೀರಾಮಕೃಷ್ಣರು ೧೮೮೬ರಲ್ಲಿ ಮಹಾಸಮಾಧಿಯನ್ನು ಹೊಂದಿದ ನಂತರ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತ ಅವರ ಉಜ್ವಲ ಜೀವನವನ್ನು ಜಗತ್ತಿಗೆ ಪ್ರಚಾರ ಮಾಡುವ ಉದ್ದೇಶದಿಂದ ಅವರ ನೇರ ಶಿಷ್ಯರು ಡಿಸೆಂಬರ್ ತಿಂಗಳಲ್ಲಿ ಬಂಗಾಳದ ಆಂಟ್‌ಪುರದಲ್ಲಿರುವ ಬಾಬುರಾಮನ (ನಂತರ ಸ್ವಾಮಿ ಪ್ರೇಮಾನಂದರು) ಮನೆಯಲ್ಲಿ ಏಸುಕ್ರಿಸ್ತನ ಜನ್ಮದಿನದ ಹಿಂದಿನ ರಾತ್ರಿಯಂದು ಅಗ್ನಿಯನ್ನು ಸಾಕ್ಷಿಯಾಗಿಟ್ಟುಕೊಂಡು ತ್ಯಾಗಜೀವನದ ಸಂಕಲ್ಪವನ್ನು ಮಾಡಿದರು. ಸರಿಯಾಗಿ ಇದರ ನೂರು ವರ್ಷಗಳಾಗುತ್ತಿದ್ದಾಗ, ಅಂದರೆ ೧೯೮೬ರಲ್ಲಿ ಬೇಲೂರು ಮಠದ ಪಕ್ಕದಲ್ಲೇ ಇರುವ ಶ್ರೀರಾಮಕೃಷ್ಣ ಮಿಷನ್ನಿನ ಶಾರದಾಪೀಠ ಕೇಂದ್ರದ ಅಂದಿನ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ಸ್ಮರಣಾನಂದಜಿ ಅವರು 'ಖಂಡನ ಭವಬಂಧನ..' ಆರಾತ್ರಿಕದ ಒಂದು ಧ್ವನಿಸುರಳಿಯನ್ನು ಹೊರತರಬೇಕೆಂದು ನಿರ್ಧರಿಸಿ, ಅದಕ್ಕಾಗಿ ತಯಾರಿ ಪ್ರಾರಂಭಿಸಿದರು. ಸ್ವಾಮಿ ವಿವೇಕಾನಂದರು ಯಾವ ರೀತಿಯಲ್ಲಿ ರಾಗತಾಳಗಳ ಸಂಯೋಜನೆಯನ್ನು ಮಾಡಿದ್ದರೋ ಅದನ್ನು ಪತ್ತೆಹಚ್ಚಿ, ಆಗಿನ ಬೇಲೂರು ಮಠದಲ್ಲಿದ್ದ ಹಿರಿಯ ಸ್ವಾಮಿಗಳ ಅನುಮತಿಯೊಂದಿಗೆ ಕೆಲಸ ಪ್ರಾರಂಭವಾಯಿತು. ಶ್ರೀಮಾತೆಯವರ ಶಿಷ್ಯರೂ ಬೇಲೂರು ಮಠದ ಎಲ್ಲ ಆಗುಹೋಗುಗಳ ಮೇಲ್ವಿಚಾರಕರೂ ಆಗಿದ್ದ ಸ್ವಾಮಿ ಅಭಯಾನಂದಜಿ ಮಹಾರಾಜ್ (ಭರತ್ ಮಹಾರಾಜ್), ಸಂಘದ ಪರಮಾಧ್ಯಕ್ಷರಾಗಿದ್ದ ಸ್ವಾಮಿ ಗಂಭೀರಾನಂದಜಿ ಮಹಾರಾಜ್ (ವಿದ್ವಾಂಸರು ಹಾಗೂ ರಾಮಕೃಷ್ಣ ಸಂಘದ ಎಲ್ಲ ವಿಚಾರಗಳನ್ನೂ ಚೆನ್ನಾಗಿ ಬಲ್ಲವರಾಗಿದ್ದರು) ಹಾಗೂ ಉಪಾಧ್ಯಕ್ಷರಾಗಿದ್ದ ಸ್ವಾಮಿ ಭೂತೇಶಾನಂದಜಿ ಇವರಿಗೆಲ್ಲ ಎಲ್ಲ ವಿವರಗಳನ್ನು ತಿಳಿಸಿ, ಧ್ವನಿಸುರಳಿಯನ್ನು ಹಾಡುವ ತಂಡದವರಿಂದ ಹಾಡಿತೋರಿಸಿ, ಅನುಮತಿಯನ್ನು ಪಡೆಯಲಾಯಿತು. ಚೆನ್ನಾಗಿ ಹಾಡಬಲ್ಲ ಸ್ವಾಮಿ ಸರ್ವಗಾನಂದಜಿ ಮಹಾರಾಜ್ ಎಲ್ಲ ಜವಾ




ಬ್ದಾರಿಯನ್ನು ನಿಭಾಯಿಸುತ್ತ ಒಳ್ಳೆಯ ಕಂಠವಿರುವ ಬಾಲಕರನ್ನು, ಬ್ರಹ್ಮಚಾರಿಗಳನ್ನು ಹಾಗೂ ಪಕ್ಕವಾದ್ಯ ನುಡಿಸಬಲ್ಲ ವಿದ್ವಾಂಸರನ್ನು ಒಗ್ಗೂಡಿಸಿದರು. ಅಂದಿನ ದಿನಗಳಲ್ಲಿ ಹೆಸರಾಂತ ಸಂಗೀತ ಸಂಯೋಜಕರಾಗಿದ್ದ ಶ್ರೀ ವಿ. ಬಲ್ಸಾರಾ ಅವರು ಆರ್ಗನ್ ನುಡಿಸಲು ಒಪ್ಪಿಕೊಂಡರು. ಇವರು ಹಲವಾರು ಹಿಂದಿ ಭಕ್ತಿಗೀತೆಗಳಿಗೆ ರಾಗ ಸಂಯೋಜನೆ ಮಾಡಿದ್ದರು ಹಾಗೂ ಲತಾ ಮಂಗೇಶ್ಕರ್ ಮುಂತಾದ ಹೆಸರಾಂತ ಹಾಡುಗಾರರೊಂದಿಗೆ ನುಡಿಸಿದ್ದರು. ಹೆಸರಾಂತ ಗಾಥಾನಿ ಕ್ಯಾಸೆಟ್ ಕಂಪನಿಯ ಮೂಲಕ Maxwell tape ಗಳನ್ನು ಬಳಸಿ ಕಲ್ಕತ್ತಾದ Audio Centre ನಲ್ಲಿ ಧ್ವನಿಮುದ್ರಣ ಮಾಡಲಾಯಿತು. ಹೆಸರಾಂತ ಕೊಳಲು ವಿದ್ವಾನ್ ಶ್ರೀ ಚಂದ್ರಕಾಂತ್ ನಂದಿ ಸಂಗೀತಗಾರರನ್ನು ಒಟ್ಟುಗೂಡಿಸುವುದು, ಧ್ವನಿಮುದ್ರಣದ ನಂತರ mixing ಸರಿಯಾಗಿ ಮಾಡುವುದು — ಈ ಎಲ್ಲ ಜವಾಬ್ದಾರಿಗಳನ್ನು ಒಪ್ಪಿಕೊಂಡರು. ಹಾಡು ರೆಕಾರ್ಡಿಂಗ್ ಆದ ಮೇಲೆ ಅದರ ಪ್ರತಿಯನ್ನು ಪೂಜ್ಯ ಉಮಾನಾಥಾನಂದಜಿ (ಶಿರೀಷ್ ಮಹಾರಾಜ್, ಒಳ್ಳೆಯ ಚಿತ್ರಕಾರರೂ ಕೂಡ, ಪೂಜ್ಯ ಅಪೂರ್ವಾನಂದಜಿ ಹಾಗೂ ಪ್ರಹ್ಲಾದ್ ಮಹಾರಾಜರ ಜೊತೆ ಬಹಳ ಕಾಲ ಇದ್ದವರು. ಅಪೂರ್ವಾನಂದಜಿ ಶ್ರೀಮಾತೆಯವರ ಶಿಷ್ಯರು ಹಾಗೂ ಸ್ವಾಮಿ ಬ್ರಹ್ಮಾನಂದರು ಬಹಳ ಪ್ರೀತಿಸುತ್ತಿದ್ದ ಗಾಯಕರು) ಹಾಗೂ ಸ್ವಾಮಿ ಕಾಶೀಶ್ವರಾನಂದಜಿ (ಬಲಾಯ್ ಮಹಾರಾಜ್, ಸ್ವಾಮಿ ಬ್ರಹ್ಮಾನಂದರ ಶಿಷ್ಯರು) ಮಹಾರಾಜರಿಗೆ ಕೇಳಿಸಿ, ಅವರಿಬ್ಬರ ಒಪ್ಪಿಗೆ ಪಡೆಯಲಾಯಿತು. ಮೊದಲಿಂದಲೂ ಇವರಿಬ್ಬರ ನೇತೃತ್ವದಲ್ಲಿ ಅಭ್ಯಾಸ ನಡೆಯುತ್ತಿತ್ತು. ಎಲ್ಲ ಸರಿಯೆಂದು ಒಪ್ಪಿಕೊಂಡ ಮೇಲೆ ಅದರ ಪ್ರತಿಗಳನ್ನು ಮಾಡಿ ಶ್ರೀಗುರುಮಹಾರಾಜರಿಗೆ ಸಮರ್ಪಿಸಿ ಪ್ರಕಟಿಸಲಾಯಿತು. ಇದಕ್ಕೆ ಅನೇಕ ದಶಕಗಳ ಹಿಂದೆಯೇ ಪೂಜ್ಯ ಸ್ವಾಮಿ ಲೋಕೇಶ್ವರಾನಂದಜಿ (ಕಾನಾಯ್ ಮಹಾರಾಜ್, ಕೊಲ್ಕತ್ತೆಯ Gol Park ನಲ್ಲಿರುವ Ramakrishna Institute of Culture ನ ಕಾರ್ಯದರ್ಶಿಗಳಾಗಿದ್ದರು) ಇಂತಹ ಧ್ವನಿಸುರುಳಿಯ ಪ್ರಯತ್ನ ಮಾಡಿದ್ದರು. ರೆಕಾರ್ಡಿಂಗ್ ಕೂಡ ಮಾಡಲಾಗಿತ್ತು. ಆದರೆ ತಂತ್ರಜ್ಞಾನದ ಸೌಲಭ್ಯ ಇನ್ನೂ ಭಾರತದಲ್ಲಿ ಇರಲಿಲ್ಲವಾದ್ದರಿಂದ ಆ ಪ್ರಯತ್ನ ಸಫಲವಾಗದೇ ಹೋಯಿತು. ರಾಗ-ತಾಳಗಳಲ್ಲೂ ವ್ಯತ್ಯಾಸವಿದೆಯೆಂದು ಬೇಲೂರು ಮಠದ ಹಿರಿಯರು ಅದನ್ನು ಒಪ್ಪಿರಲಿಲ್ಲ.

ದೇಶವಿದೇಶಗಳಲ್ಲಿ ಒಂದೇ ಚೌಕಟ್ಟಿನಲ್ಲಿ ಸಂಧ್ಯಾರತಿಯನ್ನು ಇಂದು ಲಕ್ಷಾಂತರ ಭಕ್ತರು ಹಾಡುತ್ತಾರೆ. ದೂರದೂರದ ಪ್ರದೇಶಗಳಲ್ಲೂ ಈ ಸಂಧ್ಯಾರತಿಯ ಸೊಬಗು ಭಕ್ತರನ್ನು ಒಗ್ಗೂಡಿಸುತ್ತದೆ — ನಾವು ಶ್ರೀರಾಮಕೃಷ್ಣರ ಕುಟುಂಬಕ್ಕೆ ಸೇರಿದವರು ಎಂಬ ವಿಶ್ವಾಸವನ್ನು ಮೂಡಿಸುತ್ತದೆ. ಈ ಉದಾತ್ತ ಭಾವನೆಗಳನ್ನು ಮೂಡಿಸುವ ಹಾಗೂ ಎಲ್ಲ ಮಾನವರಲ್ಲಿ ಐಕ್ಯವನ್ನು ತರಲು ಹೊರಟಿರುವ ಸ್ವಾಮಿ ವಿವೇಕಾನಂದರ ಈ ರಚನೆ ಮಂತ್ರಕ್ಕೆ ಸಮಾನ. ಇದರಲ್ಲಿ ಸಂಗೀತದೊಂದಿಗೆ ಶ್ರೀರಾಮಕೃಷ್ಣ ಪರಮಹಂಸರ ಸಮಗ್ರ ಚಿತ್ರಣವಿದೆ. ಧ್ಯಾನಕ್ಕೆ ಉಪಯೋಗಿಸಿಕೊಳ್ಳಬಲ್ಲ ಭಾವನೆಗಳನ್ನು ಸ್ವಾಮೀಜಿ ಇದರಲ್ಲಿ ಒಗ್ಗೂಡಿಸಿದ್ದಾರೆ. ಇಂತಹ ಆರತಿಯನ್ನು ಹಾಡಿ, ಧ್ಯಾನದಲ್ಲಿ ತಲ್ಲೀನರಾಗಿ ನಾವೆಲ್ಲ ಪುನೀತರಾಗೋಣ, ಶ್ರೀರಾಮಕೃಷ್ಣರ ಕೃಪೆಗೆ ಪಾತ್ರರಾಗೋಣ.

''ಸಂಗೀತ ಮತ್ತು ನಾಟಕ ಇವು ಧರ್ಮವೇ ಆಗಿವೆ. ಅದು ಎಂತಹ ಹಾಡಾದರೂ ಆಗಿರಲಿ, ಪ್ರೇಮಗೀತೆಯೇ ಆಗಲಿ ಅಥವಾ ಎಂತಹ ಹಾಡೇ ಆಗಿರಲಿ, ಚಿಂತೆಯಿಲ್ಲ. ಹಾಡುವವನ ಮನಸ್ಸು ಆ ಹಾಡಿನಲ್ಲಿದ್ದರೆ ಅವನಿಗೆ ಅದರಿಂದಲೇ ಮುಕ್ತಿ ದೊರಕುವುದು. ಅವನು ಇನ್ನೇನೂ ಮಾಡಬೇಕಾಗಿಲ್ಲ. ಅವನ ಮನಸ್ಸೆಲ್ಲ ಅದರಲ್ಲಿದ್ದರೆ ಅವನಿಗೆ ಮುಕ್ತಿ ದೊರಕುವುದು.''

— ಸ್ವಾಮಿ ವಿವೇಕಾನಂದ

''ಸಂಗೀತದ ಮೂಲಕವೂ ಭಗವಂತನನ್ನು ಸಮೀಪಿಸಬಹುದು ಎಂಬುದನ್ನು ನೆನಪಿಡು. ಸಂಗೀತವೆಂದರೆ 'ಶಬ್ದ-ಬ್ರಹ್ಮ'.''

— ಸ್ವಾಮಿ ಬ್ರಹ್ಮಾನಂದ

''ಭಕ್ತಿಗೀತೆಗಳನ್ನೂ ನೀನು ಹಾಡಬೇಕು. ಇಲ್ಲದಿದ್ದರೆ ಆಧ್ಯಾತ್ಮಿಕ ಜೀವನ ನೀರಸವಾಗುವುದು.''

— ಸ್ವಾಮಿ ತುರೀಯಾನಂದ